ಶ್ರೀ ಟಿ. ಪಾರ್ಥಸಾರಥಿ.—ರಾಜಕೀಯ ಸಮ್ಮೇಳನಕ್ಕೆ ಯಾರಿಗೆ ಬೇಕಾದರೂ ಪೋಲೀಸರ ಸಹಾಯ ಕೊಡುತ್ತೇವೆಂದು ಹೇಳಿದಿರಿ, ಎಗ್ಸಿಬಿಷನ್‌ಗೇಕೆ ಕೊಟ್ಟಿರಿ ?

ಶ್ರೀ ಬಿ. ಡಿ. ಜತ್ತಿ.—ತಮಗೆ ನಾನು ಹೇಳಿದುದು ತಿಳಿಯಲಿಲ್ಲವೆಂದು ಕಾಣುತ್ತದೆ. ಎಗ್ಸಿಬಿಷನ್‌ಗೆ ಬೇಕಾದಷ್ಟು ಜನರು ಪ್ರತಿದಿನವೂ ಬರುತ್ತಿದ್ದರು ; ಅಲ್ಲಿ Law and Order ಸರಿಯಾಗಿರಬೇಕೆಂದೂ ಸಾರ್ವಜನಿಕರಿಗೆ ತೊಂದರೆಯಾಗಬಾರದೆಂದೂ ಪೋಲೀಸರನ್ನು ಹಾಕಿದ್ದೇವೆಂದು ಹೇಳಿದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಎಲ್ಲಿ ಒಳಜಗಳ, ಗೊಂದಲ, ಭಿನ್ನಾಭಿಪ್ರಾಯಗಳು ಜಾಸ್ತಿ ಇರುತ್ತವೆಯೋ ಅಲ್ಲಿ ಹೆಚ್ಚು ಪೋಲೀಸ್‌ದಳವನ್ನು ನೇಮಕ ಮಾಡುವುದಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಹೊರಗಿನಿಂದ ಬಂದು ಯಾರೂ ಒಳಜಗಳವನ್ನು ಮಾಡಬಾರದೆಂದು ಹಾಕಲಾಗಿತ್ತು.

ಶ್ರೀ ಜಿ. ಎಸ್. ಬೊಮ್ಮೇಗೌಡ.—Law and Order ರಕ್ಷಣೆ ಮಾಡಬೇಕಾದುದು ಸರ್ಕಾರದ ಕರ್ತವ್ಯ, ಎಲ್ಲಿ ಸಭೆ ನಡೆದರೂ ಪೋಲೀಸ್ ಸಿಬ್ಬಂದಿಯನ್ನು ಕೊಡುತ್ತೀರಿ, ಎಲ್ಲೆಲ್ಲ ಒಳಜಗಳ, ಭಿನ್ನಾಭಿಪ್ರಾಯಗಳಿರುತ್ತವೋ ಅಲ್ಲೆಲ್ಲ ಕೊಡುತ್ತೀರಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಆಗಲೇ ಉತ್ತರ ಹೇಳಿದ್ದೇನೆ ಹೊರಗಿನವರು ಬಂದು ಒಳಜಗಳ ಮಾಡಬಹುದು, ಇದು ಆಗಬಾರದೆಂದು ಕೊಟ್ಟೆವು.

Sri J. B. MALLARADHYA.—The Hon'ble Chief Minister referred to the Exhibition. Was not the Exhibition run on an economic basis and did they not make money ? It was their business to meet the expenditure for maintaining law and order and provide for the necessary personnel.

Sri B. D. JATTI.—It is not only for the Exhibition ; it is for the protection of ladies and children that went to the exhibition in large numbers.

Reinstatement of Police Constables dismissed in Tumkur District.

*Q.—173. Sri P. ANJANAPPA (Sira).—

Will the Government be pleased to state :—

(*a*) whether it is a fact that thirty Constables were dismissed in Tumkur District and twenty-seven persons from among them have again been appointed;

(*b*) why the other three persons were not reinstated ;

(*c*) whether representations have not been received by them to take them back to duty;

(*d*) why they have not been reinstated in spite of such representations ;

(*e*) whether they are not aware of the hardship caused to them ;

(*f*) whether they will be taken back to duty at least now ?

*A.—Sri B. D. JATTI (Chief Minister).—

(*a*) No.

(*b*), (*c*), (*d*), (*e*) and (*f*) Does not arise in view of reply to (*a*).

ಶ್ರೀ ಪಿ. ಅಂಜನಪ್ಪ.—'ತುಮಕೂರು ಜಿಲ್ಲೆಯಲ್ಲಿ 30ಜನ ಕಾನ್ಸ್ಟೇಬಲ್‌ಗಳು ಡಿಸ್‌ಮಿಸ್ ಆಗಿ, ನಂತರ ಅವರಲ್ಲಿ 27 ಜನರನ್ನು ಪುನಃ ನೇಮಕಮಾಡಿದ್ದೀರಾ' ಎಂದು ಕೇಳಿರುವುದಕ್ಕೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ ; ಸಂಬಂಧ ಪಟ್ಟ ರಿಕಾರ್ಡುಗಳನ್ನು ತರಿಸಿಕೊಂಡು ನೋಡಿ ಹೇಳಿದ್ದೀರಾ ?

ಶ್ರೀ ಬಿ. ಡಿ. ಜತ್ತಿ.—ನನ್ನಲ್ಲಿ ಸಂಬಂಧಪಟ್ಟ ರಿಕಾರ್ಡುಗಳ ಫೈಲ್ ಇದೆ, ಯಾವ ಅಂಕಿ ಅಂಶ ಬೇಕಾದರೂ ಕೊಡುತ್ತೇನೆ.

ಶ್ರೀ ಪಿ. ಅಂಜನಪ್ಪ.—ಹಾಗಿದ್ದರೆ, 27 ಜನರಿಗೆ ಪುನಃ ಕೆಲಸ ಕೊಟ್ಟು ಇನ್ನು ಮೂರು ಜನರಿಗೆ ಅನ್ಯಾಯ ಮಾಡಿದ್ದಾರೆಂಬುದರಲ್ಲಿ ನಿಜಾಂಶ ಕಂಡು ಬಂದರೆ, ಇದನ್ನು ಪರಿಹಾರ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರಿಗೆ ಸಮಾಚಾರ ಸರಿಯಾಗಿ ಗೊತ್ತಿಲ್ಲವೆಂದು ಕಾಣುತ್ತದೆ. ಒಟ್ಟು 36 ಜನರ ಮೇಲೆ ಕೇಸ್ ಹಾಕಿದರು. ಇದರಲ್ಲಿ 9 ಜನರು ಡಿಸ್‌ಮಿಸ್ ಆದರು, 22ಜನರು ರೆಡ್ಯೂಸ್ ಆದರು, 3 ಜನರನ್ನು ನಸ್ಪೆಂಡ್ ಮಾಡಿದರು, ಇನ್ನಿಬ್ಬರನ್ನು ಎಗ್ಸಾನೊರೇಟ್ ಮಾಡಿದರು. ಆದುದರಿಂದ ಯಾರನ್ನೂ ತೆಗೆದು ಕೊಳ್ಳುವ ಪ್ರಮೇಯವಿಲ್ಲ.

General Hostel for Holenarasipur.

*Q.—224. Sri Y. VEERAPPA (Holenarasipur).—

Will the Government be pleased to state :—

(*a*) whether they are aware of the need for a General Hostel at Holenarasipur;

(*b*) whether representations were not received in this behalf ;

(*c*) the steps they have taken in the matter ?

*A.—Sri ANNA RAO GANAMUKHI (Minister for Education).—

(*a*) The need for General Hostel has to be examined.

(*b*) Representations were received.

(*c*) Does not arise in view of reply to clause (*a*).